# 'ನಾನಾರ ದೂಷಿಸಲಿ ತಾಯಿ'

**ಸ್ವಾಮಿ ಪ್ರಮೇಯಾನಂದ**



**ಪರಮ ಶಾಂತಿಯ ರಹಸ್ಯ**

ಶ್ರೀಮಾತೆಯವರ ಮರ್ತ್ಯಲೀಲೆ ಅಂತ್ಯಗೊಳ್ಳಲು ಕೇವಲ ಐದು ದಿನಗಳು ಉಳಿದಿವೆ. ಒಬ್ಬ ಭಕ್ತೆ ಶ್ರೀಮಾತೆಯವರ ದರ್ಶನಕ್ಕಾಗಿ ಬಂದಿದ್ದಾರೆ. ಆಕೆಯನ್ನು 'ಅನ್ನಪೂರ್ಣೆಯ ತಾಯಿ' ಎಂದು ಕರೆಯುತ್ತಿದ್ದರು. ಒಳಗೆ ಹೋಗಲು ಭಕ್ತಾದಿಗಳಿಗೆ ಅನುಮತಿಯಿಲ್ಲ. ಆದ್ದರಿಂದ ಆಕೆ ಶ್ರೀಮಾತೆಯವರಿದ್ದ ಕೊಠಡಿಯ ಬಾಗಿಲ ಬಳಿ ನಿಂತಿದ್ದಾರೆ. ಶ್ರೀಮಾತೆಯವರು ಆಕೆಯನ್ನು ಕಂಡು, ತಮ್ಮ ಬಳಿ ಬರುವಂತೆ ಸನ್ನೆ ಮಾಡಿದರು. ಆ ಭಕ್ತ ಮಹಿಳೆ ಶ್ರೀಮಾತೆಯವರಿಗೆ ಪ್ರಣಾಮ ಸಲ್ಲಿಸಿ ಬಿಕ್ಕಿ ಬಿಕ್ಕಿ ಅಳಲು ಶುರು ಮಾಡಿದರು. ಶ್ರೀಮಾತೆಯವರು ಅತ್ಯಂತ ಕರುಣೆಯಿಂದ ಆಕೆಗೆ ಸಾಂತ್ವನ ನೀಡಿ, ಕ್ಷೀಣ ಕಂಠದಲ್ಲಿ ಮೆಲ್ಲಗೆ ಹೇಳಿದರು, "ಮಗು, ನಿನಗೆ ಶಾಂತಿ ಬೇಕಾಗಿದ್ದರೆ, ಯಾರಲ್ಲೂ ದೋಷವನ್ನು ಹುಡುಕಬೇಡ. ನಿನ್ನಲ್ಲಿರುವ ತಪ್ಪುಗಳನ್ನೇ ನೋಡಿ, ಅವುಗಳನ್ನು ಸರಿಪಡಿಸಿಕೋ. ಈ ಜಗತ್ತನ್ನು ನಿನ್ನದಾಗಿಸಿಕೊ. ಯಾರೂ ಅಪರಿಚಿತರಲ್ಲ ಮಗು, ಈ ಜಗತ್ತು ನಿನ್ನದೇ." ಅತ್ಯಂತ ಸರಳವಾದ, ನೇರವಾದ ಮಾತುಗಳಿವು. ಆದರೆ ಎಷ್ಟು ಹೃದಯಸ್ಪರ್ಶಿ! ಎಷ್ಟು ಕಳಕಳಿಯಿಂದ ತುಂಬಿದ ಮಾತುಗಳು! ಪ್ರತಿಯೊಂದು ಶಬ್ದದಲ್ಲೂ ಜೀವನದ ಸಂಗೀತ ಲಹರಿ, ಪ್ರೀತಿಯ ರಾಗರಾಗಿಣಿ, ಆತ್ಮೀಯತೆಯ ಮಧುರ ನಾದ ಹೊರಹೊಮ್ಮುತ್ತಿದೆ. ಶ್ರೀಮಾತೆಯವರ ಮೇಲಿನ ಮಾತು ಎಷ್ಟು ಸಹಜ, ಸರಳ, ಹಾಗೂ ನೇರ ಎಂದರೆ ಅದಕ್ಕೆ ಯಾವ ವ್ಯಾಖ್ಯಾನದ ಆವಶ್ಯಕತೆ ಇಲ್ಲ. ಒಂದು ವೇಳೆ ವ್ಯಾಖ್ಯಾನದ ಆವಶ್ಯಕತೆ ಇದೆ ಎಂದರೂ ಶ್ರೀಮಾತೆಯವರ ವಾಕ್ಯಗಳ ಯಥಾರ್ಥ ತಾತ್ಪರ್ಯವನ್ನು ಯಾರು ತಾನೇ ಕೊಡಬಲ್ಲರು? ಶ್ರೀಮಾತೆಯವರ ಉಪದೇಶಕ್ಕೆ ವಿವರಣೆ ಕೊಡುವುದು ಎಂದರೆ ಉಪ್ಪಿನ ಬೊಂಬೆಯೊಂದು ಸಾಗರದ ಆಳವನ್ನು ಕಂಡುಹಿಡಿಯಲು ಹೊರಟಂತೆ ಧಾರ್ಷ್ಟ್ಯ ಅಥವಾ ಅಹಂಕಾರದ ಪ್ರದರ್ಶನವಾಗುತ್ತದೆ. ಆದರೂ ಮನುಷ್ಯ ತನ್ನ ಸ್ವಭಾವವನ್ನು ಬಿಡಲಾರ. ತನ್ನ ಬುದ್ಧಿಶಕ್ತಿಗೆ ತೋರಿದ ರೀತಿಯಲ್ಲಿ, ತಾನು ಅರ್ಥಮಾಡಿಕೊಂಡ ರೀತಿಯಲ್ಲಿ ವ್ಯಾಖ್ಯಾನ ನೀಡುವ ಪ್ರಯತ್ನವನ್ನು ಮಾಡುತ್ತಾನೆ. ಇದು ತಪ್ಪೇನಲ್ಲ, ರೂಢಿ ಸಮ್ಮತವಾಗಿಯೇ ಇದೆ. ನಾವೂ ಸಹ ಈ ರೂಢಿಯನ್ನು ಅನುಸರಿಸಿ, ನಮ್ಮ ಸೀಮಿತ, ಕ್ಷುದ್ರ ಬುದ್ಧಿಯಿಂದ ಶ್ರೀಮಾತೆಯವರ ಮೇಲಿನ ವಾಕ್ಯಗಳ ತಾತ್ಪರ್ಯವನ್ನು, ನಾವು ಅರ್ಥಮಾಡಿಕೊಂಡ ರೀತಿಯಲ್ಲಿ ವಿವರಿಸುವ ಪ್ರಯತ್ನವನ್ನು ಇಲ್ಲಿ ಮಾಡುತ್ತಿದ್ದೇವೆ. ಶಿವನ ಮೂರ್ತಿಯನ್ನು ಕೆತ್ತಲಿಕ್ಕೆ ಹೊರಟು ಕರಡಿಯನ್ನು ಮಾಡಿದ ಹಾಗೆ ಆಗಬಹುದು ಈ ನಮ್ಮ ಪ್ರಯತ್ನ. ಆದರೂ ನಾವು ಈ ದುಸ್ಸಾಹಸಕ್ಕೆ ಕೈಹಾಕಲು ಹೊರಟಿದ್ದೇವೆ.

"ಮಗು, ನಿನಗೆ ಶಾಂತಿ ಬೇಕಾದರೆ ಯಾರ ತಪ್ಪನ್ನೂ ಹುಡುಕಬೇಡ. ನಿನ್ನಲ್ಲಿರುವ ದೋಷಗಳ ಬಗ್ಗೆಯೇ ಗಮನ ಹರಿಸು. ಈ ಜಗತ್ತನ್ನು ಪ್ರೀತಿಸಲು ಕಲಿ. ಯಾರೊಬ್ಬರೂ ಹೊರಗಿನವರಲ್ಲ, ಎಲ್ಲಾ ನಿನ್ನವರೇ."

ಪರಮ ಶಾಂತಿಯ ರಹಸ್ಯ, ಶಾಂತಿಯ ಉಪಾಯ ಈ ಮೇಲಿನ ಮಾತುಗಳಲ್ಲಿ ವ್ಯಕ್ತವಾಗಿದೆ. ಶಾಂತಿಯ ಈ ಸರಳ ಉಪಾಯ ಯಾವುದೇ ದರ್ಶನಶಾಸ್ತ್ರದ, ಯುಕ್ತಿ ಅಥವಾ ತರ್ಕದ ಫಲವಲ್ಲ. ಶ್ರೀಮಾತೆಯವರ ಈ ಸಂದೇಶ ಯಾವ ರಾಜಕೀಯ ಸಮಸ್ಯೆಯ ಪರಿಹಾರರೂಪವಾಗಿಯೂ ವ್ಯಕ್ತವಾದದ್ದಲ್ಲ. ಈ ಸಂದೇಶ ಪ್ರತಿಯೊಬ್ಬರ ವೈಯಕ್ತಿಕ ಜೀವನಕ್ಕೆ ಅತ್ಯಂತ ಅಮೂಲ್ಯ, ಅತ್ಯಂತ ಸಹಾಯಕಾರಿ. ಗಮನವಿಟ್ಟು ನೋಡಿದರೆ ತಿಳಿಯುತ್ತದೆ,

ಪೂಜ್ಯ ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳಲ್ಲಿ ಒಬ್ಬರು. ಮಹಾಸಂಘದ ಪ್ರಧಾನ ಕೇಂದ್ರ ಬೇಲೂರು ಮಠದ ನಿರ್ವಾಹಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಮೂಲ ಬಂಗಾಳಿ ಭಾಷೆಯ ಲೇಖನ 'ಉದ್ಬೋಧನ' ಪತ್ರಿಕೆಯಲ್ಲಿ ಪ್ರಕಟವಾಗಿತ್ತು.

**ಮನಸ್ಸಿನಲ್ಲಿಯೇ ಒಬ್ಬನು ಶುದ್ಧಿ ಅಶುದ್ಧಿಗಳನ್ನು ಭಾವಿಸುವುದು. ಮೊದಲು ಒಬ್ಬನು ತನ್ನ ಮನಸ್ಸನ್ನು ದೋಷಪೂರಿತವನ್ನಾಗಿ ಮಾಡಿಕೊಳ್ಳುತ್ತಾನೆ, ನಂತರವಷ್ಟೆ ಇನ್ನೊಬ್ಬರಲ್ಲಿರುವ ತಪ್ಪುಗಳನ್ನು ಕಾಣುತ್ತಾನೆ. ಬೇರೊಬ್ಬರ ತಪ್ಪುಗಳನ್ನು ಎತ್ತಿ ಆಡುವುದರಿಂದ ನಿನಗೇನು ಪ್ರಯೋಜನ? ಅದು ನಿನ್ನನ್ನೇ ತೊಂದರೆಗೀಡು ಮಾಡುತ್ತದೆ. ಇದೇ ನನ್ನ ಮನೋಭಾವ. ಆದ್ದರಿಂದಲೇ ನಾನು ಯಾರ ತಪ್ಪುಗಳನ್ನೂ ನೋಡಲಾರೆ. ನನಗೆ ಯಾರಾದರೊಬ್ಬರು ಚಿಕ್ಕದಾದೊಂದು ಸಹಾಯ ಮಾಡಿದರೆ, ಅದನ್ನೂ ಕೂಡ ನೆನಪಿನಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸುತ್ತೇನೆ. ಇತರರ ತಪ್ಪುಗಳನ್ನು ನೋಡುತ್ತಿರುವುದು! ಅದನ್ನೆಂದಿಗೂ ಮಾಡಬಾರದು. ನಾನೆಂದಿಗೂ ಅದನ್ನು ಮಾಡುವುದಿಲ್ಲ. ಕ್ಷಮೆಯೇ ತಪಸ್ಸು.** – ಶ್ರೀಶಾರದಾದೇವಿ

ಈ ವಾಕ್ಯಗಳಲ್ಲಿ ವಿಶ್ವ ಶಾಂತಿಯ ಉಪಾಯ ಅತ್ಯಂತ ಸ್ಪಷ್ಟವಾಗಿ ಇಂಗಿತವಾಗಿದೆಯೆಂದು. ಕಾರಣ, ಸಮಾಜದಲ್ಲಿಯ ಶಾಂತಿ, ರಾಷ್ಟ್ರದ ಶಾಂತಿ ಹಾಗೂ ವಿಶ್ವದ ಶಾಂತಿ – ಇವೆಲ್ಲವೂ ನಮ್ಮೆಲ್ಲರ ವೈಯಕ್ತಿಕ ಶಾಂತಿಯ ಆಧಾರದ ಮೇಲೆಯೇ ನಿಂತಿದೆ. ಸ್ವಸ್ತಿ ವಾಚನ ಅಥವಾ ಶಾಂತಿಮಂತ್ರಗಳ ಉಚ್ಚಾರಣೆ ಪೂಜಾ ಪದ್ಧತಿಯ ಒಂದು ಅಂಗ. ಎಲ್ಲರ ಮಂಗಳಕ್ಕಾಗಿ ಮಾಡುವ ಪ್ರಾರ್ಥನೆಯೇ ಈ ಸ್ವಸ್ತಿವಾಚನದ ಸಾರಾಂಶ. ವ್ಯಕ್ತಿಯ ಕಲ್ಯಾಣದಲ್ಲಿಯೇ ಸಮುದಾಯದ ಕಲ್ಯಾಣ ಹಾಗೂ ಸಮುದಾಯದ ಮಂಗಳ ವ್ಯಕ್ತಿಯ ಮಂಗಳದಲ್ಲಿರುವ ಭಾವ ಸ್ವಸ್ತಿವಾಚನದ ಮಂತ್ರಗಳಲ್ಲಿ ಪರಿಸ್ಫುಟವಾಗಿ ಹೊರಹೊಮ್ಮಿದೆ. ಶ್ರೀಮಾತೆಯವರಿಂದ ಉಚ್ಚರಿಸಲ್ಪಟ್ಟ ಈ ವಚನಾಮೃತವೇ ಶಾಂತಿ ಪೂಜೆಯ, ಸ್ವಸ್ತಿವಾಚನದ ಮಂತ್ರಸ್ವರೂಪ. ಶಾಂತಿ ಉಪಾಸನೆಯ ಮೂಲತತ್ತ್ವ, ಶಾಂತಿಪಥದ ಮೊದಲ ಹೆಜ್ಜೆ.

ವ್ಯಕ್ತಿಗತ ಶಾಂತಿಯಿಂದ ವಿಶ್ವಶಾಂತಿ

ಆದರೆ ಇಲ್ಲೊಂದು ಪ್ರಶ್ನೆ. ಶಾಂತಿ ಯಾರಿಗೆ ಬೇಕಾಗಿದೆ? ಎಲ್ಲರೂ ತೋರಿಕೆಗೆ 'ಶಾಂತಿ ಬೇಕು, ಶಾಂತಿ ಬೇಕು' ಎಂದು ಹೇಳುತ್ತಾರೆಯೇ ಹೊರತು ನಿಜವಾಗಿಯೂ ಹೃತ್ಪೂರ್ವಕವಾಗಿ ಶಾಂತಿಯನ್ನು ಬಯಸುವವರು ಎಷ್ಟು ಮಂದಿ? ಆದ್ದರಿಂದಲೇ ಶಾಂತಿಯ ಪ್ರತಿಮೂರ್ತಿಯಾದ ಶ್ರೀಮಾತೆಯವರಿಂದ ಹೊರಬಂದ ಸಂದೇಶ: "ನಿನಗೆ ಒಂದು ವೇಳೆ ಶಾಂತಿ ಬೇಕಿದ್ದರೆ, ಮಗು ...." ಈ ಜಗತ್ತಿನಲ್ಲಿ ನಿಜವಾದ ಶಾಂತಿಯನ್ನು ಬಯಸುವವರು ಬೆರಳೆಣಿಕೆಯಷ್ಟು ಜನ ಮಾತ್ರ. ಮನುಷ್ಯ ಎಷ್ಟೇ ಅಶಾಂತಿಯಲ್ಲಿ ಬೇಯುತ್ತಿದ್ದರೂ, 'ನನಗೆ ಶಾಂತಿ ಬೇಕು, ಶಾಂತಿ ಬೇಕು' ಎಂದು ಬಾಯಲ್ಲಿ ಹೇಳುತ್ತಿದ್ದರೂ, ಶಾಂತಿಪ್ರಾಪ್ತಿಗಾಗಿ ಯಾವುದನ್ನು ಅವಶ್ಯವಾಗಿ ಮಾಡಲೇಬೇಕೋ, ಅದನ್ನು ಮಾಡುವುದಿಲ್ಲ ಅಥವಾ ಮಾಡಲು ಅಸಮರ್ಥನಾಗಿದ್ದಾನೆ. ಇದೊಂದೇ ಅಲ್ಲ, ಅಶಾಂತಿಯ ಸೃಷ್ಟಿಗೆ ಯಾವುದು ಕಾರಣವೋ, ಯಾವ ಕಾರ್ಯ ಅಥವಾ ಯಾವ ಚಿಂತನೆ ಮಾಡಿದರೆ ಅಶಾಂತಿ ಉಂಟಾಗುತ್ತದೆಯೋ ಅದನ್ನೆ ಪುನಃ ಪುನಃ ಮಾಡುತ್ತಾನೆ. ಆದರೆ ಮನುಷ್ಯನ ಈ ಪ್ರವೃತ್ತಿ ಆಶ್ಚರ್ಯಕರವೇನೂ ಅಲ್ಲ. ಇದೇ ಜಗತ್ತಿನ ನಿಯಮ ಮತ್ತು ಜೀವನದ ಕಟು ಸತ್ಯ. ಆದರೂ, ಇಷ್ಟೆಲ್ಲಾ ತೊಂದರೆ, ದುರ್ಬಲತೆ ಇದ್ದರೂ ಸಹ, ಮನುಷ್ಯ ತನಗೆ ಎದುರಾಗುವ ಪ್ರತಿಕೂಲ ಮತ್ತು ಅನನುಕೂಲ ಪರಿಸ್ಥಿತಿಗಳನ್ನು ಜಯಿಸಿ, ವೈಯಕ್ತಿಕ ಜೀವನದಲ್ಲಿ ಶಾಂತಿಪ್ರಾಪ್ತಿಗಾಗಿ ಹೋರಾಡುತ್ತಾನೆ. ಅಷ್ಟೇ ಅಲ್ಲ, ಸಾಮಾಜಿಕ ಜೀವನದಲ್ಲೂ ನಾನಾ ಧರ್ಮಗಳು ಹಾಗೂ ನಾನಾ ದೇಶಗಳ ಮಧ್ಯೆ ಶಾಂತಿ ಸ್ಥಾಪನೆಗಾಗಿ ಅವಿರತ ಹೋರಾಟವನ್ನು ನಡೆಸುತ್ತಲೇ ಇದ್ದಾನೆ.

ಮೊದಲೇ ಹೇಳಿದಂತೆ, ಈ ಜಗತ್ತಿನಲ್ಲಿ ನಿಜವಾಗಿ ಶಾಂತಿಯನ್ನು ಬಯಸುವವರು ಬಹಳ ಕಡಿಮೆ. ಅಂಥವರಲ್ಲೂ ಹಲವರಿಗೆ ನಿಜವಾದ ಶಾಂತಿಯ ಮಾರ್ಗದ ಬಗ್ಗೆ ಅರಿವೇ ಇಲ್ಲ. ಈ ನಿಜವಾದ ಶಾಂತಿಯ ಅನ್ವೇಷಣೆಯಲ್ಲಿ, ಮೊದಲೇ ನಾವು ವಿಚಾರಿಸಿ ಅರಿತುಕೊಳ್ಳಬೇಕಾದ ವಿಷಯವೇನೆಂದರೆ, ಅಶಾಂತಿಯ ಕಾರಣವೇನು ಎಂಬುದು. ಇತರರಲ್ಲಿ ತಪ್ಪನ್ನು ಕಂಡುಹಿಡಿಯುವುದೇ ಅಶಾಂತಿಯ ಮುಖ್ಯ ಕಾರಣವೆಂದು ವಿಶ್ಲೇಷಿಸಿ ನೋಡಿದಾಗ ತಿಳಿದು ಬರುತ್ತದೆ. ನಾವು ಮಾತ್ರ ತೊಳೆದ, ಪವಿತ್ರ ತುಳಸಿ ಎಲೆಯಂತೆ ಸಾಚಾ ವ್ಯಕ್ತಿಗಳು ಹಾಗೂ ಉಳಿದವರೆಲ್ಲ ಕೆಟ್ಟವರು. ಆದುದರಿಂದ ಈ ಜಗತ್ತನ್ನು ಉದ್ಧರಿಸಬೇಕು, ಜಗತ್ತನ್ನು ಪರಿವರ್ತಿಸಬೇಕು ಎಂಬ ಹುಚ್ಚು ಮನೋಭಾವವೆ ಅಶಾಂತಿಯ ಮುಖ್ಯ ಕಾರಣ.

ಶಾಂತಿ ಎಂಬುದು ವೈಯಕ್ತಿಕ ವಿಷಯ, ಆಂತರಿಕ ವಿಷಯ. ಅದರ ಪ್ರಾಪ್ತಿಯ ಮಾರ್ಗವೂ ನಮ್ಮೊಳಗೇ ಇರುವಂಥದ್ದು. ಮೊದಲು ನಮ್ಮೊಳಗೆ ನಾವು ಶಾಂತಿ ಪಡೆಯದೆ, ಜಗತ್ತನ್ನು ಸರಿಪಡಿಸಹೊರಡುವ, ಶಾಂತಿಮಯವಾಗಿ ಮಾಡುವ ಪ್ರಯತ್ನಗಳು ನೀರಿನಲ್ಲಿ ಹೋಮ ಮಾಡಿದಂತೆಯೇ ಸರಿ! ಈ ಜಗತ್ತು ಮೊದಲಿನಿಂದ ಯಾವ ರೀತಿ ನಡೆದುಬಂದಿದೆಯೋ ಅದೇ ರೀತಿ ಮುಂದೆಯೂ ನಡೆಯುತ್ತದೆ. ಇದೇ ಪ್ರಪಂಚದ ರೀತಿ. ಈ ಜಗತ್ತು ನಾಯಿಬಾಲದಂತೆ ಡೊಂಕು. ಈ ಜಗತ್ತನ್ನು ಉದ್ಧಾರ ಮಾಡಲು ನಮಗೇಕೆ ಇಷ್ಟೊಂದು ಅನಾವಶ್ಯಕ ಚಿಂತೆ? ಆದ್ದರಿಂದ ನಮ್ಮನ್ನು ನಾವು ಸರಿಪಡಿಸಿಕೊಳ್ಳುವುದು ಮತ್ತು ನಮ್ಮ ತಪ್ಪು, ದುರ್ಬಲತೆಗಳನ್ನು ದೂರ ಮಾಡಿಕೊಳ್ಳುವುದೇ ನಮ್ಮ ಮೊದಲ ಕರ್ತವ್ಯ, ನಿಜವಾಗಿಯೂ ಶಾಂತಿ ಬೇಕಾದರೆ ಬೇರೆಯವರ ತಪ್ಪು, ದೌರ್ಬಲ್ಯಗಳ ಕಡೆಗೆ ದೃಷ್ಟಿ ಹರಿಸದೆ, ನಮ್ಮ ಆತ್ಮೋದ್ಧಾರಕ್ಕಾಗಿ ಮಾತ್ರ ಪ್ರಯತ್ನಿಸಬೇಕು. ಆದುದರಿಂದಲೇ ಜಗನ್ಮಾತೆ ಶ್ರೀಶಾರದಾದೇವಿಯವರು ಶಾಂತಿಯನ್ನು ಪಡೆಯುವ ಸರಳ ಉಪಾಯವನ್ನು ಜಗತ್ತಿಗೆ ತಿಳಿಸಿದ್ದು: "ಮಗು, ನಿನಗೆ ಶಾಂತಿ ಪಡೆಯುವ ಇಚ್ಛೆಯಿದ್ದರೆ ಯಾರಲ್ಲೂ ದೋಷವನ್ನು ಕಾಣಬೇಡ. ನಿನ್ನ ತಪ್ಪುಗಳನ್ನೇ ಸರಿಪಡಿಸಿಕೊ."

**ಪರದೋಷ ದರ್ಶನ – ಅಶಾಂತಿಗೆ ಕಾರಣ**

ನಾವು ಕೆಲವೊಮ್ಮೆ ತೋರಿಕೆಗೆ ಹೇಳುತ್ತೇವೆ – "ನಾನಾರ ದೂಷಿಸಲಿ ತಾಯಿ." ಎಂದು. ಆದರೆ ನಮ್ಮ ಆಚರಣೆ ಈ ಮೇಲಿನ ಉಕ್ತಿಗೆ ಸಂಪೂರ್ಣ ವಿರುದ್ಧ. ಈ ಪ್ರಸಂಗದಲ್ಲಿ ಶ್ರೀರಾಮಕೃಷ್ಣರು ಹೇಳುತ್ತಿದ್ದ 'ಬ್ರಾಹ್ಮಣ ಹಾಗೂ ಗೋಹತ್ಯೆ'ಯ ಕಥೆ ನೆನಪಿಗೆ ಬರುತ್ತದೆ. ಒಬ್ಬ ಬ್ರಾಹ್ಮಣ ಬಹಳ ಕಷ್ಟಪಟ್ಟು ತೋಟವನ್ನು ಬೆಳೆಸಿದ್ದ. ಒಂದು ದಿನ ಹಸುವೊಂದು ನುಗ್ಗಿ ತೋಟದಲ್ಲಿದ್ದ ಗಿಡಗಳನ್ನು ತಿನ್ನಲು ಶುರು ಮಾಡಿತು. ಕ್ರೋಧದಿಂದ ಬ್ರಾಹ್ಮಣನು ಅದಕ್ಕೆ ಹೊಡೆದಾಗ, ಅದು ಸತ್ತೇ ಹೋಯಿತು. ಆ ಆಷಾಢಭೂತಿ, ಕಪಟಿ ಬ್ರಾಹ್ಮಣನು ಗೋಹತ್ಯೆಯ ಪಾಪವನ್ನು ಇಂದ್ರನ ಮೇಲೆ ಹಾಕಿದ. ಈ ಸುಂದರ ತೋಟವನ್ನು ನಾನೇ ಬೆಳೆಸಿದ್ದು, ಈ ಗಿಡಮರಗಳನ್ನು ನಾನೇ ಹಾಕಿದ್ದು ಎಂದು ಜಂಭಪಡುತ್ತಿದ್ದ ಬ್ರಾಹ್ಮಣನು ತಾನು ಮಾಡಿದ ಗೋಹತ್ಯೆಯ ಕಾರ್ಯವನ್ನು ಮಾತ್ರ ಇಂದ್ರನ ಮೇಲೆ ಹೊರಿಸಿದ. ನಮ್ಮೆಲ್ಲರ ಅವಸ್ಥೆಯೂ ಆ ಬ್ರಾಹ್ಮಣನ ಹಾಗೆಯೇ. ಒಳ್ಳೆಯ ಕೆಲಸದ, ಸಫಲ ಕಾರ್ಯದ ಯಶಸ್ಸನ್ನು ಪಡೆದುಕೊಳ್ಳಲು, ಗೌರವ, ಸನ್ಮಾನ ಸ್ವೀಕರಿಸಲು ನಾವು ಸದಾ ಸಿದ್ಧ. ಕೆಲಸ ಕೆಟ್ಟು ಹೋದಾಗ, ವಿಫಲವಾದಾಗ ಅದಕ್ಕಾಗಿ ನಾವು ಬೇರೆಯವರನ್ನು ದೂಷಿಸಲು ಸದಾ ಮುನ್ನುಗ್ಗುತ್ತೇವೆ. ನಮ್ಮಲ್ಲಿರುವ ತಪ್ಪುಗಳನ್ನೂ, ದುರ್ಬಲತೆಗಳನ್ನೂ ಒಪ್ಪಿಕೊಂಡು, ನಮ್ಮನ್ನು ನಾವು ತಿದ್ದಿಕೊಳ್ಳುವುದಕ್ಕೆ ಸದಾ ಹಿಂಜರಿಯುತ್ತೇವೆ. ಆದ್ದರಿಂದಲೇ ತನ್ನ ಭಕ್ತ–ಮಕ್ಕಳ ಶುಭಕಾಮನೆಗಾಗಿ, ಅಶುಭನಾಶಿನಿಯಾದ ಶ್ರೀಮಾತೆಯವರ ಉಪದೇಶ ಇದು: **'ಯಾರ ದೋಷವನ್ನೂ ನೋಡಬೇಡ. ನಿನ್ನ ತಪ್ಪುಗಳ ಕಡೆ ಗಮನಹರಿಸು.'**

ಈ ಪ್ರಪಂಚದಲ್ಲಿ ಮನುಷ್ಯರ ದೋಷ, ದುರ್ಬಲತೆಗಳು ಇಲ್ಲವೇ ಇಲ್ಲ ಎಂದಲ್ಲ. ಆದರೆ ಅವುಗಳನ್ನು ದೊಡ್ಡದಾಗಿ ಮಾಡಿ, ರಂಪಾಟ ಮಾಡಿದರೆ ನಮಗೇ ಅಶಾಂತಿ ಕಟ್ಟಿಟ್ಟ ಬುತ್ತಿ. ಇದರಲ್ಲಿ ಸಂದೇಹವೇ ಇಲ್ಲ. ಇದರಿಂದ ಕೇವಲ ನಮಗೆ ಮಾತ್ರ ಅಶಾಂತಿಯಲ್ಲ, ನಮ್ಮ ಸುತ್ತಮುತ್ತಲಿನವರೂ ಸಹ ಅಶಾಂತಿಯ ಬೇಗೆಯಲ್ಲಿ ಬೇಯಬೇಕಾಗುತ್ತದೆ. ಆದ್ದರಿಂದ ಪರರ ಬಗೆಗಿನ ಚರ್ಚೆ, ಪರರ ನಿಂದೆ ಮಾಡದೆ, ಆತ್ಮ ವಿಶ್ಲೇಷಣೆಯ ಮೂಲಕ ನಮ್ಮನ್ನು ನಾವು ತಿದ್ದಿ, ಸರಿಪಡಿಸಿಕೊಳ್ಳಬೇಕು. ಸದಾ ಸರ್ವದಾ ಪ್ರಾರ್ಥನಾಶೀಲರಾಗಿ, ತೀವ್ರ ಆಧ್ಯಾತ್ಮಿಕ ಸಾಧನೆಯಲ್ಲಿ ಮುಳುಗಬೇಕು. ನಮ್ಮ ಮನಸ್ಸಿನಿಂದ ಈ ಪರರ ದೋಷ ನೋಡುವ ದುಶ್ಚಟ ಶಾಶ್ವತವಾಗಿ ದೂರವಾಗಲೆಂದು ಹೃತ್ಪೂರ್ವಕವಾಗಿ ಭಗವಂತನಲ್ಲಿ ಪ್ರಾರ್ಥಿಸಬೇಕು. ಆಗ ನಮ್ಮ ಹೃದಯ ನಿರ್ಮಲವಾಗಿ, ಪವಿತ್ರವಾಗಿ ನಮ್ಮ ದೈನಂದಿನ ವ್ಯಾವಹಾರಿಕ ಜೀವನ ಶಾಂತಿಮಯವಾಗುತ್ತದೆ, ಮಧುರವಾಗುತ್ತದೆ. ಹಾಗಾದಲ್ಲಿ ಮಾತ್ರ ನಮ್ಮ ಈ ಎಲ್ಲಾ ಪ್ರಾರ್ಥನೆ, ಸಾಧನೆ ಸಾರ್ಥಕವಾಗುತ್ತದೆ, ಜೀವನ ಧನ್ಯವಾಗುತ್ತದೆ.

> **ತಪ್ಪು ಮಾಡುವುದು ಮಾನವನ ಹುಟ್ಟುಗುಣ. ಟೀಕಿಸುವುದರಿಂದ ಅದನ್ನು ತಿದ್ದಿದಂತಾಗುವುದಿಲ್ಲ. ಬದಲಾಗಿ ಒಳ್ಳೆಯ ಗುಣಗಳನ್ನೇ ಕಾಣುವುದರಿಂದ, ತಪ್ಪುಗಳು ಹುಟ್ಟಿದಲ್ಲಿಯೇ ಮಾಯವಾಗುವಂತೆ ಮಾಡಬಹುದು. ... ತಪ್ಪು ಮಾಡುವುದು ಮನುಷ್ಯನ ಸ್ವಭಾವ. ಆದರೆ ತಪ್ಪಿ ನಡೆಯುವವನನ್ನು ತಿದ್ದಿ ಸರಿದಾರಿಯಲ್ಲಿ ನಡೆಸಬಲ್ಲವರು ಎಷ್ಟು ಜನ?....ಪ್ರತಿಯೊಬ್ಬರೂ ಅನುಸರಿಸಿಕೊಂಡು ಹೋಗಬೇಕು. ಎಲ್ಲವನ್ನೂ ನೋಡಿಕೊಳ್ಳುವುದಕ್ಕೆ ಭಗವಂತ ಇದ್ದಾನೆ...** – ಶ್ರೀಮಾತೆ ಶಾರದಾದೇವಿ

**ವಸುಧೈವ ಕುಟುಂಬಕಮ್**

ಅಶಾಂತಿಯ ಮತ್ತೊಂದು ಕಾರಣವೇನೆಂದರೆ ಮನುಷ್ಯ ಮನುಷ್ಯರಲ್ಲಿ ನಾವು ಮಾಡುವ ಭೇದಭಾವ ಮತ್ತು ಪಕ್ಷಪಾತ ಧೋರಣೆ. 'ಇವನು ನಮ್ಮವನು, ಅವನು ನಮ್ಮವನಲ್ಲ' ಎಂಬ ಭೇದಬುದ್ಧಿ ಕೆಲವೊಮ್ಮೆ ಅತ್ಯಂತ ಪ್ರಬಲವಾಗಿ ತಲೆ ಎತ್ತಿ, ವೈಯಕ್ತಿಕ ಹಾಗೂ ಸಾಮಾಜಿಕ ಜೀವನದಲ್ಲಿ ದುರಂತವನ್ನುಂಟು ಮಾಡುತ್ತದೆ. ಈ ಆತ್ಮೀಯ–ಪರಕೀಯವೆಂಬ ಭೇದಬುದ್ಧಿಯಿಂದಲೇ ಮನುಷ್ಯ ಸ್ವಾರ್ಥಿಯಾಗುತ್ತಾನೆ. ಆಗ ಉಳಿದವರ ಒಳಿತಿಗಾಗಿ ಆತ ಯೋಚಿಸಲಾರ, ಅವರ ಕಷ್ಟ–ನಷ್ಟಗಳನ್ನು ಕಂಡರೂ ಆತನ ಮನ ಕರಗುವುದಿಲ್ಲ. ತನ್ನ ಮತ್ತು ತನ್ನವರ ಸುಖ–ಸೌಕರ್ಯಗಳ ಬಗ್ಗೆಯೇ ಸದಾ ಕಾಳಜಿ ವಹಿಸುತ್ತಾನೆ. ತನ್ನ ಹಿತ ರಕ್ಷಣೆಗಾಗಿ ಇತರರನ್ನು ವಂಚಿಸಲೂ ಸಹ ಅಂಥವನು ಹಿಂಜರಿಯುವುದಿಲ್ಲ. ಇದರ ಪರಿಣಾಮ ಘೋರ ಅಶಾಂತಿ, ತಳಮಳ. ಎಲ್ಲರೂ ನಮ್ಮವರೇ, ನಾವೆಲ್ಲಾ ಒಂದೇ – ಈ ಮನೋಭಾವದ ಅಭಾವವೇ ಇಂದು ಎಲ್ಲೆಲ್ಲೂ ಕಾಣಬರುತ್ತಿರುವ ಹಿಂಸೆ, ಕ್ರೌರ್ಯ ಮತ್ತು ಪ್ರತ್ಯೇಕತಾವಾದಗಳಿಗೆ ಕಾರಣ. ಈ 'ಸ್ವಕೀಯ–ಪರಕೀಯ' ಮನಃಸ್ಥಿತಿಯ ಮನುಷ್ಯ ತನ್ನೊಬ್ಬನ ಸ್ವಾರ್ಥಕ್ಕಾಗಿ ಸಮಾಜದ ಹಿತವನ್ನೇ ಬಲಿಕೊಡುತ್ತಾನೆ. ಆದುದರಿಂದಲೇ ಈ ಭೇದಭಾವ, ಸಂಕುಚಿತ ಮನೋದೃಷ್ಟಿ, ಮತ್ತು ಪಕ್ಷಪಾತ ಧೋರಣೆಗಳು ಮಹಾ ಅನರ್ಥಕಾರಿ, ವಿಧ್ವಂಸಕಾರಿ. ಯಾರಲ್ಲಿ ಈ ಭೇದಬುದ್ಧಿಯ ಪ್ರಭಾವ ಎಷ್ಟರಮಟ್ಟಿಗೆ ಕಡಿಮೆ ಇದೆಯೋ ಅಷ್ಟರಮಟ್ಟಿಗೆ ಆತನನ್ನು ಮಹಾನ್ ವ್ಯಕ್ತಿಯೆಂದು ಪರಿಗಣಿಸಬಹುದು. ಅಂಥ ವ್ಯಕ್ತಿಯೇ ಮಾನವಕುಲವನ್ನು ಹೃತ್ಪೂರ್ವಕವಾಗಿ ಪ್ರೀತಿಸಲು ಸಮರ್ಥನಾಗುತ್ತಾನೆ.

ಹಿತೋಪದೇಶ (ಮಿತ್ರಲಾಭ : ೧೦೬) ದಲ್ಲಿ ಈ ಮಾತು ಬರುತ್ತದೆ:

**ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್।**
**ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್ ॥**

"ಈತ ನನ್ನ ಆತ್ಮೀಯ, ಆತ ಪರಕೀಯ ಎಂಬೆಲ್ಲಾ ಭೇದ

ಬುದ್ಧಿಯನ್ನು ಹೀನ ಜನರು ಮಾಡುತ್ತಾರೆ. ಸಮಸ್ತ ಮಾನವ ಕುಲವೇ ತನ್ನದೆಂದು ಉದಾರ ಹೃದಯವುಳ್ಳವರು ತಿಳಿಯುತ್ತಾರೆ." ಭೇದಭಾವ, ಪಕ್ಷಪಾತ ಬುದ್ಧಿಯನ್ನು ಮರೆತು, ಈ ಜಗತ್ತೆಲ್ಲಾ ತನ್ನವೆಂದು ತಿಳಿಯದಿದ್ದರೆ ನಿಜವಾದ ಶಾಂತಿಯ ಲಾಭ ಕನಸೇ ಸರಿ. ಆದ್ದರಿಂದಲೇ ಶಾಂತಿರೂಪಿಣಿಯಾದ ಶ್ರೀಮಾತೆಯವರ ಶಾಂತಿಯ ಉಪಾಯ ಹೀಗಿದೆ: "ಈ ಜಗತ್ತು ನಿನ್ನದೆಂದು ತಿಳಿ, ಮಗು. ಇಲ್ಲಿ ಯಾರೂ ಪರಕೀಯರಲ್ಲ, ಯಾರೂ ಹೊರಗಿನವರಲ್ಲ. ಎಲ್ಲರೂ ನಿನ್ನವರೇ." ಈ ಪ್ರಪಂಚದಲ್ಲಿ ಯಾರೂ ಆಗಂತುಕರಲ್ಲ, 'ಎಲ್ಲರೂ ನನ್ನವರೇ', ಎಲ್ಲರೂ ಭಗವಂತನ ಮಕ್ಕಳೇ – ಎಂದು ಸದಾ ನಾವು ಭಾವಿಸುತ್ತಿದ್ದರೆ, 'ವಸುಧೈವ ಕುಟುಂಬಕಮ್' (ಇಡೀ ಪ್ರಪಂಚವೇ ಒಂದು ಕುಟುಂಬ) ಎಂಬ ಅರಿವು ನಮ್ಮಲ್ಲಿ ಉಂಟಾಗುತ್ತದೆ. ಈ 'ವಸುಧೈವ ಕುಟುಂಬಕಮ್' ಜ್ಞಾನದಿಂದಲೇ ಮನುಷ್ಯ ಎಲ್ಲ ಜೀವಿಗಳಲ್ಲೂ ಪ್ರೇಮಮಯನಾದ ಭಗವಂತನನ್ನು ನೋಡುತ್ತಾನೆ. ಸತತ, ನಿರಂತರ ಅಭ್ಯಾಸದ ಪರಿಣಾಮವಾಗಿ ಮನುಷ್ಯ ಯಾವಾಗ ಆ ಉಚ್ಚ ಅವಸ್ಥೆಯನ್ನು ಹೊಂದುತ್ತಾನೆಯೋ, ಆಗಲೇ ಆತ ಪ್ರತಿಯೊಂದು ಜೀವಿಯೂ ಈಶ್ವರನ ಅಭಿವ್ಯಕ್ತಿಯೆಂದು, ಎಲ್ಲರೂ ಆ ಭಗವಂತನ ಮಕ್ಕಳೇ, ಆದ್ದರಿಂದ ಎಲ್ಲರೂ ತನ್ನ ಪರಮ ಆತ್ಮೀಯರು ಎಂದು ತಿಳಿದು ಎಲ್ಲರನ್ನೂ ಹೃತ್ಪೂರ್ವಕವಾಗಿ ಪ್ರೀತಿಸುತ್ತಾನೆ.

ಮಾತಾ ಮೇ ಪಾರ್ವತೀದೇವಿ ಪಿತಾ ದೇವೋ ಮಹೇಶ್ವರಃ ।
ಬಾಂಧವಾಃ ಶಿವಭಕ್ತಾಶ್ಚ ಸ್ವದೇಶೋ ಭುವನತ್ರಯಮ್ ॥

"ದೇವಿ ಪಾರ್ವತಿ ನನ್ನ ತಾಯಿ, ದೇವ ಮಹೇಶ್ವರ ನನ್ನ ತಂದೆ, ಶಿವಭಕ್ತರೆಲ್ಲಾ ನನ್ನ ಆತ್ಮೀಯರು ಹಾಗೂ ಮೂರು ಲೋಕಗಳೂ ನನ್ನ ಸ್ವಂತ ದೇಶ."

ಮೇಲಿನ ಸತ್ಯದ ಅರಿವು ಉಂಟಾದಾಗ ಮಾತ್ರವೇ, ಒಬ್ಬ ವ್ಯಕ್ತಿಗೆ ಸಂಪೂರ್ಣ ಶಾಂತಿಯ ಅನುಭವ ಉಂಟಾಗುತ್ತದೆ. ಇತರರ ದೋಷದ ಕಡೆ ಗಮನ ಕೊಡದೆ, ಎಲ್ಲರನ್ನೂ ಹೃತ್ಪೂರ್ವಕವಾಗಿ ಪ್ರೀತಿಸುವ ಆದರ್ಶದ ಕಡೆ ಮುನ್ನಡೆದರೆ ವ್ಯಕ್ತಿಜೀವನದಲ್ಲಿ ಶಾಂತಿ ತುಂಬಿ ತುಳುಕಾಡುತ್ತದೆ. ಅದೇ ರೀತಿ ಸಮಾಜ ಹಾಗೂ ವಿಶ್ವ ಶಾಂತಿಮಯವಾಗುತ್ತವೆ.

ಶ್ರೀಮಾತೆಯವರಲ್ಲಿ ಕೈಮುಗಿದು, ದೀನತೆಯಿಂದ ಪ್ರಾರ್ಥಿಸೋಣ:

"ಹೇ ಶಾಂತಿ ಸ್ವರೂಪಿಣಿ ಮಾತೆ! ನೀನು ತೋರಿಸಿರುವ ಶಾಂತಿಯ ಪಥದಲ್ಲಿ ಮುನ್ನಡೆಯಲು ನಮಗೆ ಶಕ್ತಿಯನ್ನು ದಯಪಾಲಿಸು. ಇತರರ ದೋಷವನ್ನು ನೋಡದೆ ಆತ್ಮವಿಶ್ಲೇಷಣೆ ಮತ್ತು ಆತ್ಮವಿಮರ್ಶೆಗಳ ಮೂಲಕ ನಮ್ಮನ್ನು ನಾವು ಪರೀಕ್ಷಿಸಿಕೊಳ್ಳುತ್ತ, ನಮ್ಮೆಲ್ಲ ತಪ್ಪುಗಳನ್ನು, ದುರ್ಬಲತೆಗಳನ್ನು ಹೊರದೂಡುವ ಶಕ್ತಿ, ಉತ್ಸಾಹ ದಯಪಾಲಿಸು. ಹೇ ಮಾತೆ! ಈ ಜಗತ್ತಿನ ಎಲ್ಲರನ್ನೂ ಹೃತ್ಪೂರ್ವಕವಾಗಿ ಪ್ರೀತಿಸುವ, ಎಲ್ಲರಿಗೂ ಒಳಿತನ್ನು ಬಯಸುವ ಉದಾರ ಮನೋಭಾವ ನೀಡು. ನನ್ನ ಹೃದಯಮಂದಿರದಲ್ಲಿ 'ಶಾಂತಿಯ ಕುಂಭ' ಶಾಶ್ವತವಾಗಿ ನೆಲೆಸುವಂತಾಗಲಿ ಹಾಗೂ ನನ್ನ ಜೀವನ ಪೂರ್ಣತೆ, ಧನ್ಯತೆಗಳನ್ನು ಹೊಂದಿ ಸಾರ್ಥಕವಾಗಲಿ ಎಂದು ಆಶೀರ್ವಾದ ಮಾಡು."

✪

**ಚಿಂತನ ಪ್ರಭ**

## ದೈವಸಂಕಲ್ಪ

ಮೈಸೂರಿನಿಂದ ರೈಲು ಬೆಂಗಳೂರು ಸ್ಟೇಷನ್ ಸೇರಿದ ಮೇಲೆ ಹುಬ್ಬಳ್ಳಿಗೆ ಹೋಗುವುದೇ? ಗುಂತಕಲ್ಲಿಗೆ ಹೋಗುವುದೇ? ಯಾವುದು ಯಾವ ಕಡೆ ಹೋಗಬೇಕು, ಅದರ ನಿಯಾಮಕರು ಬಲ್ಲರು. ಅದು ಎತ್ತ ಹೋಗಬೇಕೋ ಅತ್ತ ಹೋಗುವಂತೆ, ಪಾಳಿಯ ಕೆಲಸಗಾರ ಕಂಬಿಯನ್ನು ತಿರುಗಿಸುತ್ತಾನೆ. ರೈಲಿಗೆ ತಾನು ಎತ್ತ ಹೋಗಬೇಕು ಎಂದು ತಿಳಿಯದು.

ತನ್ನ ಗುರಿ ಯಾವುದು ಅದನ್ನು ಮನುಷ್ಯ ಕಾಣ. ಅವನ ದೈವ ಬಲ್ಲದು. ಏನೇ ಸಂಗತಿ ನಡೆಯುವ ಮೊದಲು ನಾವು ದೈವ ಮಾಡಿದ್ದಾಗಲಿ ಎಂದು ಕೆಲಸ ಮಾಡದೆ ಕುಳ್ಳಿರಬಾರದು. ಆದರೆ ಒಂದು ಸಂಗತಿ ನಡೆದ ಮೇಲೆ ಅದು ದೈವದ ಇಚ್ಛೆ ಎಂದು ಒಪ್ಪಿ ಮುಂದೆ ಏನು ಎಂದು ನಡೆಯುವುದೇ ಜಾಣತನ. ಇದರಿಂದ ಭಾಗ್ಯ ತಪ್ಪಿತು ಎಂಬ ವ್ಯಥೆ ತಪ್ಪುತ್ತದೆ. ಮುಂದೆ ಮಾಡಲು ಕೆಲಸ ಕಾಣುತ್ತದೆ. ಅದನ್ನು ಮಾಡಲು ಬೇಕಾದ ಸಮಾಧಾನ ಒದಗುತ್ತದೆ. ಅದನ್ನು ಮಾಡುವುದರಲ್ಲಿ ಸಂತೋಷವೇ ಲಭಿಸುತ್ತದೆ. ಏನೋ ನಷ್ಟವಾಯಿತು ಎಂದು ದುಃಖದಲ್ಲಿ ಕುಗ್ಗದೆ ಮನುಷ್ಯ ದಿನವನ್ನು ಶುಭದ ಸಾಧನೆಯಲ್ಲಿ ಕಳೆಯುತ್ತಾನೆ, ಜನ್ಮವನ್ನು ಸಾರ್ಥಕ ಮಾಡಿಕೊಳ್ಳುತ್ತಾನೆ, ದೇವರ ಸೇವಕನೇ ಆಗಿರುತ್ತಾನೆ.

ದಡದಲ್ಲಿ ಬಿದ್ದಿರುವ ಮರದ ಕೊರಡನ್ನು ಸಮುದ್ರದ ನೀರು ಒಮ್ಮೆ ಮುಟ್ಟಿ ಒಳಗೆ ಎಳೆದುಕೊಳ್ಳುತ್ತದೆ. ಇಷ್ಟ ಬಂದಷ್ಟು ಹೊತ್ತು ತೇಲಿಸಿ ಆಡಿಸುತ್ತದೆ. ಇದಕ್ಕೆ ಸಾಕೆಂದು ತೋರಿದಾಗ ಮತ್ತೆ ತರುತ್ತದೆ. ಮರಳ ಮೇಲಕ್ಕೆ ಎಸೆಯುತ್ತದೆ.

ಬಾಳಿನಲ್ಲಿ ಮನುಷ್ಯ ತನ್ನ ಯತ್ನದಲ್ಲಿರುವುದನ್ನು ತಾನು ಮಾಡಬೇಕು. ತನ್ನ ಯತ್ನಕ್ಕೆ ಮಿಂಚಿದ್ದನ್ನು ದೈವಸಂಕಲ್ಪಕ್ಕೆ ಬಿಟ್ಟು ಅದು ನೀರಿಗೆ ಸೆಳೆದಾಗ ನೀರಿನಲ್ಲಿ ತೇಲಿ, ಗಡ್ಡೆಗೆ ಎಸೆದಾಗ ಅಲ್ಲಿ ಸಮಾಧಾನವಾಗಿ ಬಾಳಬೇಕು. ದೈವ ಎನ್ನುವುದು ಮನಸ್ಸಿಗೆ ನಿಜವಾಗಿ ಕಂಡರೆ, ಮನುಷ್ಯ ಸಮಾಧಾನದಿಂದ ಮಾತ್ರ ಅಲ್ಲ, ಸಂತೋಷವಾಗಿಯೇ ಬಾಳುವನು.

– ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಆಧಾರ: ಭಾವ)